ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೭**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆರಡನೆಯ ಅಧಿವೇಶನ

## ಮಂಗಳವಾರ, ದಿನಾಂಕ: ೨೯ನೇ ನವೆಂಬರ್, ೨೦೧೬

---

### ಸಮೂಹ – II

೧. ಇಂಧನ ಸಚಿವರು
೨. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು
೩. ಸಹಕಾರ ಮತ್ತು ಸಕ್ಕರೆ ಸಚಿವರು
೪. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು
೫. ಕೃಷಿ ಸಚಿವರು
೬. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು
೭. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

---

### ಕೃಷಿ ಹೊಂಡ ಯೋಜನೆ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೧ (೮೭೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕೃಷಿ ಹೊಂಡ ಯೋಜನೆಯು ಜನರ ಜೀವಕ್ಕೆ ಕಂಟಕವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೨ ವರ್ಷಗಳಲ್ಲಿ ಕೃಷಿ ಹೊಂಡ ನಿರ್ವಹಣೆಯ ನಿರ್ಲಕ್ಷ್ಯದಿಂದ ಮೃತಪಟ್ಟ ಜನರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು)

(ಇ) ಕೃಷಿ ಹೊಂಡ ನಿರ್ವಹಣೆಯ ನಿರ್ಲಕ್ಷ್ಯದಿಂದ ಮೃತಪಟ್ಟ ಜನರ ಕುಟುಂಬಗಳಿಗೆ ಏನು ಪರಿಹಾರ ನೀಡಲಾಗಿದೆ ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು)

(ಈ) ಕೃಷಿ ಹೊಂಡ ನಿರ್ವಹಣೆಯ ನಿರ್ಲಕ್ಷ್ಯವನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಮೂಡಿಗೆರೆ ಪಟ್ಟಣ ಪಂಚಾಯತಿ ವತಿಯಿಂದ ನಿರ್ಮಿಸಲಾಗಿರುವ ಅಂಗಡಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨ (೮೨೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೂಡಿಗೆರೆ ಪಟ್ಟಣ ಪಂಚಾಯತಿ ವತಿಯಿಂದ ನಿರ್ಮಿಸಲಾಗಿರುವ ಅಂಗಡಿ ಮಳಿಗೆಗಳೆಷ್ಟು ;

(ಆ) ಈ ಅಂಗಡಿ ಮಳಿಗೆಗಳನ್ನು ನಿಯಮಾನುಸಾರ ಬಾಡಿಗೆದಾರರಿಗೆ ಹಂಚಿಕೆ ಮಾಡಲಾಗಿದೆಯೇ ;

(ಇ) ಈ ಅಂಗಡಿ ಮಳಿಗೆಗಳಿಂದ ಪಟ್ಟಣ ಪಂಚಾಯತಿಗೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು ;

(ಈ) ಈ ಅಂಗಡಿ ಮಳಿಗೆಗಳನ್ನು ಮಂಜೂರು ಮಾಡಲು ಹರಾಜು ಪ್ರಕ್ರಿಯೆ ಯಾವ ಸಾಲಿನಲ್ಲಿ ನಡೆದಿದೆ ; ಈ ಅಂಗಡಿ ಮಳಿಗೆಗಳನ್ನು ಪಡೆದ ಪರವಾನಗಿದಾರರು ಬಳಕೆ ಮಾಡುತ್ತಿದ್ದಾರೆಯೇ ಅಥವಾ ಒಳ ಬಾಡಿಗೆ ನೀಡಿದ್ದಾರೆಯೇ ? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕೃಷಿ ಇಲಾಖಾ ಕಾರ್ಯ ಚಟುವಟಿಕೆಗಳ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೮೦೬) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೈದ್ರಾಬಾದ್ ಕರ್ನಾಟಕ ವಿಭಾಗದಲ್ಲಿ ಕೃಷಿ ಇಲಾಖೆ ವತಿಯಿಂದ ರೈತ ವರ್ಗದವರಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಲು ರೈತ ಸಂಪರ್ಕ ಕೇಂದ್ರಗಳು ಸೇರಿದಂತೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಮೂರು ವರ್ಷಗಳ ಗುರಿ ಸಾಧನೆಗಳ ವಿವರ ನೀಡುವುದು ;

(ಆ) ಇಲಾಖಾ ವ್ಯಾಪ್ತಿಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪಂಗಡಗಳ ರೈತರುಗಳಿಗೆ ಒದಗಿಸಿಕೊಟ್ಟ ಸೌಲಭ್ಯಗಳು ಯಾವುವು ; ಯೋಜನೆ ಅನುಷ್ಠಾನಕ್ಕಾಗಿ ಬಳಸಿಕೊಂಡ ಅನುದಾನದ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಬೆಳೆ ವಿಮಾ ಯೋಜನೆಯಡಿಯಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ದಿ. ಮಿಲೇನಿಯಂ ಕ್ರೆಡಿಟ್ ಸಹಕಾರ ಸಂಘ, ಗಾಂಧಿಬಜಾರ್ ಇದರ ವ್ಯವಹಾರದ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)** –

೯೪ (೮೨೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಿ ಮಿಲೇನಿಯಂ ಕ್ರೆಡಿಟ್ ಸಹಕಾರ ಸಂಘ ನಿಯಮಿತ, ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು, ಇದು ಅಸ್ತಿತ್ವದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಸಂಸ್ಥೆ ಪ್ರಾರಂಭಗೊಂಡಿದ್ದು ಯಾವಾಗ ; ಆಗಿನಿಂದ ಈತನಕ ಪ್ರತಿವರ್ಷ ಸಮರ್ಪಕ ಆಡಿಟ್ ವರದಿ ಇಲಾಖೆಗೆ ಸಲ್ಲಿಸಿ ಅನುಮೋದನೆ ಪಡೆಯಲಾಗಿದೆಯೇ ;

(ಆ) ಇಲ್ಲದಿದ್ದಲ್ಲಿ, ಕಾರಣಗಳೇನು ; ಈ ಸಂಸ್ಥೆಯ ಮೇಲೆ ಯಾವುದಾದರೂ ಆರ್ಥಿಕ ಅಪರಾಧ ಪ್ರಕರಣ ಸೇರಿದಂತೆ ಗುರುತರ ಆರೋಪಗಳಿರುವುದು ಕಂಡುಬಂದಿದೆಯೇ ; ಈ ಆರೋಪಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಸಾಲ ನೀಡುವಿಕೆಯಲ್ಲಿ ಅಕ್ರಮ ನಕಲಿ ದಾಖಲೆಗಳ ಸೃಷ್ಟಿ ಕುರಿತು ಸರ್ಕಾರದ ನಿಲುವೇನು ; ಈ ಸಹಕಾರ ಸಂಘದ ಆರ್ಥಿಕ ವಹಿವಾಟುಗಳು, ಲಾಭದಲ್ಲಿದೆಯೇ, ನಷ್ಟದಲ್ಲಿದೆಯೇ ವಿವರಗಳನ್ನು ಒದಗಿಸುವುದು ;

(ಈ) ಸದರಿ ಸಂಘದಲ್ಲಿ ಹಣಕಾಸು ಅವ್ಯವಹಾರ ಅಕ್ರಮಗಳ ಬಗ್ಗೆ ತನಿಖೆ ಕಾರ್ಯವನ್ನು ಕೈಗೊಳ್ಳಲಾಗಿದೆಯೇ ; (ವಿಚಾರಣಾ ತನಿಖಾ ವರದಿಯ ವಿವರ ಲಗತ್ತಿಸುವುದು) ಈ ನಿಟ್ಟಿನಲ್ಲಿ ಆಡಳಿತ ಮಂಡಳಿಯ/ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ? (ವಿವರ ಒದಗಿಸುವುದು)

## ರಾಯಚೂರಿನಲ್ಲಿ ಬರುವ ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್. ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೯೫ (೮೬೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ತಾಲ್ಲೂಕಿನ ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್. ಸ್ಥಾಪನೆ ಮಾಡಲು ಸಾವಿರಾರು ಎಕರೆ ಭೂಮಿಯನ್ನು ರೈತರಿಂದ ಪಡೆದಿರುವುದು ಮತ್ತು ಈ ವಿದ್ಯುತ್ ಘಟಕ ಉತ್ಪಾದನೆಯಿಂದ ಉಷ್ಣಾಂಶ ಹೆಚ್ಚಾಗಿರುವುದು ನಿಜವೇ ; ಈ ಭಾಗದಲ್ಲಿ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್. ವಿದ್ಯುತ್ ಘಟಕಗಳಿಂದ ೩೩೬೦ ಮೆ.ವ್ಯಾಟ್ ಉತ್ಪಾದನೆ ಮಾಡುವ ಘಟಕಗಳಿದ್ದು, ಮಾಲಿನ್ಯ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಇ) ರಾಯಚೂರಿನಲ್ಲಿ ಬರುವ ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್. ಗೆ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಕೊಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಈ) ರಾಯಚೂರಿನಲ್ಲಿರುವ ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್. ನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು ?

## ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೯೬ (೮೧೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಸ್ವಾಮ್ಯದ ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾಯನ್ನು ಕಳೆದ ಮೂರು ವರ್ಷಗಳಿಂದ ಚಾಲನೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಏಕೈಕ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯನ್ನು ಉಳಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಅಲ್ಲಿಯ ನೌಕರರಿಗೆ ಮತ್ತು ಮೈಸೂರು ಸಕ್ಕರೆ ಕಾರ್ಖಾನೆಯ ಆಶ್ರಯದಲ್ಲಿ ನಡೆಯುತ್ತಿರುವ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ ಎಷ್ಟು ತಿಂಗಳಿಂದ ವೇತನವನ್ನು ನೀಡಿಲ್ಲ ;

(ಈ) ವೇತನ ಪಾವತಿ ಮಾಡಲು ಸರ್ಕಾರ ಕ್ರಮ ವಹಿಸಿದೆಯೇ ;

(ಉ) ಕಾರ್ಖಾನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

## ಕೊಬ್ಬರಿ ಹಾಗೂ ಅಡಿಕೆ ಬೆಲೆ ಕುಸಿತದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೮೫೫+೧೨೬೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಯಾವ ಜಿಲ್ಲೆಗಳಲ್ಲಿ ತೆಂಗು (ಕೊಬ್ಬರಿ) ಹಾಗೂ ಅಡಿಕೆ ಬೆಳೆಯಲಾಗುತ್ತದೆ ; (ವಿವರ ನೀಡುವುದು) ೨೦೧೬–೧೭ನೇ ಸಾಲಿನಲ್ಲಿ ಮೀಸಲಾಗಿಟ್ಟ ಅನುದಾನದ ಮೊತ್ತವೆಷ್ಟು ;

(ಆ) ಕಳೆದ ವರ್ಷದಿಂದ ರೈತರು ಬೆಳೆದ ಈ ಪದಾರ್ಥಗಳ ಬೆಲೆ ಬಾರಿ ಕುಸಿತದಿಂದ, ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೇಂದ್ರ ಸರ್ಕಾರ ಕೊಬ್ಬರಿ ಹಾಗೂ ಅಡಿಕೆಗೆ ನಿಗಧಿಪಡಿಸಿರುವ ಬೆಂಬಲ ಬೆಲೆಯೇನು ; ರಾಜ್ಯ ಸರ್ಕಾರವು ರೈತರ ಮನವಿ ಮೇರೆಗೆ ಕೇಂದ್ರ ಸರ್ಕಾರಕ್ಕೆ ಈಗಿರುವ ಬೆಲೆಯನ್ನು ಹೆಚ್ಚಿಸುವಂತೆ ಮನವಿ ಮಾಡಿದೆಯೇ ;

(ಈ) ಹಾಲಿ ಮಾರುಕಟ್ಟೆ ದರಕ್ಕೆ ಸರ್ಕಾರವು ಸಹಾಯಧನ ನೀಡಿ ರೈತರಿಗೆ ಅನುಕೂಲ ಮಾಡಿಕೊಡಲಾಗುವುದೇ ; ಬೆಳೆಗಾರರ ನಷ್ಟಕ್ಕೆ ಇತರ ಯೋಜನೆಯಡಿ ಅನುಕೂಲ ಕಲ್ಪಿಸಲಾಗಿದೆಯೇ ;

(ಉ) ಬರಗಾಲದಿಂದ ತತ್ತರಿಸುವ ಈ ರೈತರಿಗೆ ಯಾವ ರೀತಿ ಸಹಾಯ ಮಾಡಿಕೊಡಲಾಗುವುದು ?

## ಹನಿ ನೀರಾವರಿ ಸಹಾಯಧನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೮ (೮೫೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಹನಿ ನೀರಾವರಿ (Drip Irrigation) ಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ; ಖರ್ಚಾದ ಅನುದಾನ ಎಷ್ಟು ; (ವಿವರ ಒದಗಿಸುವುದು)

(ಆ) ಹನಿ ನೀರಾವರಿಗೆ (Drip Irrigation) ಗೆ ಸಹಾಯಧನ ಕೋರಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕಾಲಾವಧಿ ಎಷ್ಟು ; ವಿವರ ಸಲ್ಲಿಸಲು ನಿಗಧಿಪಡಿಸಿದ ಕಾಲಾವಧಿ ಎಷ್ಟು ; (ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಸ್ವೀಕೃತವಾದ ಎಷ್ಟು ಅರ್ಜಿಗಳಿಗೆ ಹನಿ ನೀರಾವರಿ ಸಹಾಯಧನ ಮಂಜೂರು ಮಾಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಭಾವಣಿ ಸೌರ ವಿದ್ಯುತ್ ಉತ್ಪಾದನೆ ಬಗ್ಗೆ

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು) –**

೯೯ (೮೩೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭಾವಣಿ ಸೌರ ವಿದ್ಯುತ್ ಉತ್ಪಾದನೆ ಸಂಬಂಧ ಖಾಸಗಿ ವ್ಯಕ್ತಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆಯೇ ; ಮಾಡಿಕೊಂಡಿದ್ದಲ್ಲಿ, ಅವುಗಳ ಸಂಪೂರ್ಣ ವಿವರಗಳನ್ನು ನೀಡುವುದು ;

(ಆ) ಈ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ನಿಯಮಗಳನ್ನು ಅನುಸರಿಸದಿರುವುದು ಮತ್ತು ಕೆಇಆರ್‌ಸಿ ಮಾರ್ಗಸೂಚಿಗಳನ್ನು ಗಾಳಿಗೆ ತೂರಿರುವುದು ನಿಜವೇ;

(ಇ) ಇದಕ್ಕೆ ಕಾರಣರಾದ ಅಧಿಕಾರಿ/ನೌಕರರನ್ನು ಗುರುತಿಸಲಾಗಿದೆಯೇ ; ಅವರುಗಳ ಮೇಲೆ ಕೈಗೊಂಡ ಕ್ರಮಗಳೇನು ;

(ಈ) ಸೌರ ವಿದ್ಯುತ್ ಉತ್ಪಾದನೆ ಮಾಡಲು ಇರುವ ಮಾನದಂಡಗಳೇನು ?

## ಕೊಡಗು ಜಿಲ್ಲೆಯಲ್ಲಿ ಭತ್ತದ ನಾಟಿಗೆ ಒಳಪಟ್ಟಿರುವ ಜಮೀನಿನ ಬಗ್ಗೆ

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೦ (೮೮೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಡಗು ಜಿಲ್ಲೆಯಲ್ಲಿ ಭತ್ತದ ನಾಟಿಗೆ ಒಳಪಟ್ಟಿರುವ ಜಮೀನೆಷ್ಟು ; ಖಾಲಿ ಬಿಡಲಾಗಿರುವ ಜಮೀನೆಷ್ಟು ; ಇದಕ್ಕೆ ಕಾರಣಗಳೇನು ; (ಎಕರೆವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಭತ್ತದ ನಾಟಿಗೆ ನೀರಿನ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಮುಂಜಾಗ್ರತಾ ಕ್ರಮಗಳೇನು;

(ಇ) ನೀರಿನ ಕೊರತೆಯಿಂದಾಗಿ ಎಷ್ಟು ಪ್ರಮಾಣದಲ್ಲಿ ಭತ್ತದ ಇಳುವರಿ ಕಡಿಮೆಯಾಗಿದೆ ? (ಕಳೆದ ಮೂರು ವರ್ಷಗಳ ಇಳುವರಿ ಮಾಹಿತಿ ನೀಡುವುದು)

## ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳ ದುರಸ್ಥಿಕಾರ್ಯದ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೧ (೮೨೯) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ತುಂಬಾ ಹಳೆಯ ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳನ್ನು ಗುರುತಿಸಲಾಗಿದೆಯೇ ; ಅವುಗಳ ಸಂಖ್ಯೆ ಎಷ್ಟು ಮತ್ತು ಯಾವುವು ;

(ಆ) ಕೊಡಗು ಜಿಲ್ಲೆಯಲ್ಲಿರುವ ತುಂಬಾ ಪುರಾತನವಾದ ಹಾಗೂ ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳು ಯಾವುವು ;

(ಇ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಐಗೂರು ಮತ್ತು ಹೆಬ್ಬಾಲೆಯಲ್ಲಿರುವ ಸೇತುವೆಗಳು ಅಪಾಯಕಾರಿ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇವುಗಳ ದುರಸ್ಥಿಗೆ ಬೇಕಾದ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಸಾಂಸ್ಕೃತಿಕ ಕ್ಲಬ್‌ಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೨ (೭೮೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಸಾಂಸ್ಕೃತಿಕ (ಸ್ಪೋರ್ಟ್ಸ್) ಕ್ಲಬ್‌ಗಳ ಪರವಾನಗಿ ನೀಡಲು ಅನುಸರಿಸುವ ಮಾನದಂಡಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ಈ ಕ್ಲಬ್‌ಗಳಲ್ಲಿ, ಯಾವ ರೀತಿಯ ಆಟಗಳನ್ನು ಆಡಲು ಅನುಮತಿ ನೀಡಲಾಗಿರುತ್ತದೆ ; (ಆಟಗಳವಾರು ವಿವರ ನೀಡುವುದು)

(ಇ) ಇಂತಹ ಕ್ಲಬ್‌ಗಳಲ್ಲಿ ಇಸ್ಪೀಟ್ ಆಟದಲ್ಲಿನ ವಿವಿಧ ರೀತಿಯ ಆಟಗಳನ್ನೊಳಗೊಂಡಂತೆ ಅನಧಿಕೃತವಾಗಿ ಆಟ ಆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಒಂದು ವರ್ಷದಿಂದ ಈವರೆಗೆ ಇಂತಹ ಎಷ್ಟು ಕ್ಲಬ್‌ಗಳಿಗೆ ದಾಳಿ ಮಾಡಿ ಈ ಅನಧಿಕೃತ ಚಟುವಟಿಕೆಗಳನ್ನು ತಡೆಗಟ್ಟಲಾಗಿದೆ ; ಈ ದಾಳಿಗೊಳಪಟ್ಟ ಕ್ಲಬ್‌ಗಳೆಷ್ಟು ? (ವಿವರ ನೀಡುವುದು)

## ರಾಜ್ಯ ರಸ್ತೆ ಇಕ್ಕೆಲಗಳಲ್ಲಿ ಮೈಲುಗಲ್ಲುಗಳಲ್ಲಿ ನಮೂದಿಸಿರುವ ಊರುಗಳ ಹೆಸರುಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೦೩ (೭೯೧) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಹೆದ್ದಾರಿ ಮಂಗಳೂರು, ಬೆಳ್ತಂಗಡಿ, ಮೂಡಿಗೆರೆ ಹಾಗೂ ಬೇಲೂರು ರಾಜ್ಯ ರಸ್ತೆ ಇಕ್ಕೆಲಗಳಲ್ಲಿ ಮೈಲುಗಲ್ಲುಗಳಲ್ಲಿ ನಮೂದಿಸಿರುವ ವಿಳ್ಳುಪುರಂ ರಾಜ್ಯದ ಯಾವ ಭಾಗದಲ್ಲಿದೆ ;

(ಆ) ರಾಜ್ಯ ಹೆದ್ದಾರಿಯ ರಸ್ತೆಗಳ ಇಕ್ಕೆಲಗಳಲ್ಲಿ ಮೈಲುಗಲ್ಲುಗಳಲ್ಲಿ ಊರುಗಳ ಹೆಸರುಗಳನ್ನು ನಮೂದಿಸಲು ಇರುವ ಮಾನದಂಡಗಳೇನು ;

(ಇ) ಈ ರೀತಿ ಮಾರ್ಗಸೂಚಿ ಫಲಕಗಳು, ಮೈಲುಗಲ್ಲುಗಳ ಗೊಂದಲಗಳನ್ನು ನಿವಾರಣೆ ಮಾಡಲು ಏಕರೂಪದ ಸಂಹಿತೆಯನ್ನು ಅಳವಡಿಸಲಾಗುವುದೇ ?

## ರಾಜ್ಯದಲ್ಲಿ ನಗರಸಭೆ, ಪುರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಬಗ್ಗೆ

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೪ (೮೩೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸಲು ಅವಶ್ಯಕತೆಯಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ವಾರು ವಿವರ ನೀಡುವುದು)

(ಆ) ಈ ಪೌರ ಕಾರ್ಮಿಕರ ಸಮಸ್ಯೆ ನೀಗಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಹಾವೇರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಬ್ಸಿಡಿ ದರದಲ್ಲಿ ವಿತರಿಸಿದ ಯಂತ್ರಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೧೦೫ (೭೮೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಕಳೆದ ಮೂರು ವರ್ಷಗಳಲ್ಲಿ ಸಬ್ಸಿಡಿ ದರದಲ್ಲಿ ವಿತರಿಸಿದ ಉಳುಮೆ ಯಂತ್ರಗಳ ಸಂಖ್ಯೆ ಎಷ್ಟು ;

(ಆ) ರೈತರಿಗೆ ಉಳುಮೆ ಯಂತ್ರವನ್ನು ಸಬ್ಸಿಡಿ ದರದಲ್ಲಿ ನೀಡುವಾಗ ಯಂತ್ರವನ್ನು ಮಾತ್ರ ನೀಡಲಾಗುವುದೆ ; ಅಥವಾ ಯಂತ್ರಕ್ಕೆ ಬೇಕಾದ ಉಳಿದ ಸಾಮಾಗ್ರಿಗಳನ್ನು ನೀಡಲಾಗುವುದೇ ; (ವಿವರ ನೀಡುವುದು)

(ಇ) ಕೆಲವು ರೈತ ಸಂಪರ್ಕ ಕೇಂದ್ರದಲ್ಲಿ ಖಾಲಿ ಉಳುಮೆ ಯಂತ್ರದ ಇಂಜಿನ್‌ನನ್ನು ಹಸ್ತಾಂತರಿಸಿ ಅದಕ್ಕೆ ಬೇಕಾದ ಉಳಿದ ಪರಿಕರಗಳನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಇದು ರೈತ ವಿರೋಧಿ ಎಂದು ಅನ್ನಿಸುವುದಿಲ್ಲವೇ ?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಪಿ7, ಕಾ.ಸೂ. , ಪ್ರತಿಗಳು 1500